ಬೇವೂರು ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಾಲ ನೀಡುವ ವಿಚಾರವಾಗಿ ತಾರತಮ್ಯ ಮಾಡಲಾಗುತ್ತಿದೆ. ರೈತ ತನ್ನ ಬೆಳೆ ಸಾಲ ತೀರುವಳಿ ಮಾಡಿದ ನಂತರವೂ ಆತನ ಹೆಸರಿನಲ್ಲಿ ಆತನ ಅರಿವಿಗೆ ಬಾರದಂತೆ ಹೊಸ ಸಾಲ ಪಡೆದು ರೈತನಿಗೆ ವಂಚನೆ ಮಾಡಲಾಗುತ್ತಿದೆ.

• **ರಾಜ್ಯ ರೈತ ಸಂಘ** ಚನ್ನಪಟ್ಟಣ

# ಮಾನವ ಹಕ್ಕುಗಳ ಆಯೋಗದಲ್ಲಿ 9600 ಪ್ರಕರಣ ಇತ್ಯರ್ಥ

## ಜಿಲ್ಲಾ ಹಂತದಲ್ಲಿಯೇ ಪ್ರಕರಣಗಳ ವಿಚಾರಣೆ ಹಾಗೂ ವಿಲೇವಾರಿ | ಮಾನವ ಹಕ್ಕುಗಳ ಉಲ್ಲಂಘನೆ ನಿಯಂತ್ರಣಕ್ಕೆ ಅಗತ್ಯವಿರುವ ಎಲ್ಲ ಕ್ರಮ

• **ಕನ್ನಡಪ್ರಭ ವಾರ್ತೆ** ರಾಮನಗರ

ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ ಬಾಕಿ ಉಳಿದಿದ್ದ ಹಾಗೂ ನಾನು ಅಧ್ಯಕ್ಷನಾದ ಮೇಲೆ ದಾಖಲಾದ ಪ್ರಕರಣಗಳೂ ಸೇರಿದಂತೆ ಒಟ್ಟು 12,400 ಪ್ರಕರಣಗಳ ಪೈಕಿ, 9,600 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. 2800 ಪ್ರಕರಣಗಳು ವಿವಿಧ ಹಂತದಲ್ಲಿ ಬಾಕಿ ಇವೆ ಎಂದು ಆಯೋಗದ ಅಧ್ಯಕ್ಷ ಟಿ.ಶ್ಯಾಮ್ ಭಟ್ ತಿಳಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ಬಳಿಕ ಆಯೋಗದಲ್ಲಿ ದಾಖಲಾದ ಪ್ರಕರಣಗಳ ವಿಚಾರಣೆಗೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ಬೆಂಗಳೂರಿಗೆ ಅಲೆಯುವುದನ್ನು ತಪ್ಪಿಸಲು ಆಯೋಗವೇ ಜಿಲ್ಲೆಗಳಿಗೆ ಭೇಟಿ ನೀಡುತ್ತಿದೆ. ಈಗಾಗಲೇ 19 ಜಿಲ್ಲೆಗಳಿಗೆ ಭೇಟಿ ನೀಡಲಾಗಿದೆ. ಜಿಲ್ಲಾ ಹಂತದಲ್ಲಿಯೇ ಪ್ರಕರಣಗಳ ವಿಚಾರಣೆ ಹಾಗೂ ವಿಲೇವಾರಿ ಕಾರ್ಯ ಮಾಡಲಾಗುತ್ತಿದೆ ಎಂದರು.

ಆಯೋಗಕ್ಕೆ ಹೆಚ್ಚಿನ ಸೌಕರ್ಯ ನೀಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು. ದೂರುಗಳನ್ನು ಆನ್‌ಲೈನ್ ಅಥವಾ ಅಂಚೆ ಮೂಲಕವೂ ಸಲ್ಲಿಸಬಹುದಾಗಿದೆ. ದೂರುದಾರರು ಇಲ್ಲದಿದ್ದರೂ ಅವರ ಪರವಾಗಿ ಬೇರೆ ಯಾರಾದರೂ ದೂರು ನೀಡಬಹುದು. ರಾಮನಗರಜಿಲ್ಲೆಗೆಸಂಬಂಧಿಸಿದಂತೆ 45 ಪ್ರಕರಣಗಳು ಆಯೋಗಕ್ಕೆ ಸಲ್ಲಿಕೆಯಾಗಿದ್ದು, 16 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. 29 ಪ್ರಕರಣಗಳು ಬಾಕಿ ಇವೆ ಎಂದು ಅವರು ತಿಳಿಸಿದರು.

ಆಯೋಗದ ಸದಸ್ಯರಾದ ಎಸ್.ಕೆ.ವಂಟಿಗೋಡಿ ಮಾತನಾಡಿ, ಆಯೋಗದಿಂದ ಮಾನವ ಹಕ್ಕುಗಳ ಉಲ್ಲಂಘನೆ ನಿಯಂತ್ರಣಕ್ಕೆ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಗುತ್ತಿದೆ ಎಂದರು.

**ಆಯೋಗದ ಹೆಸರಿಟ್ಟುಕೊಂಡವರ ವಿರುದ್ಧ ಕಾನೂನು ಕ್ರಮ:** ಮಾನವ ಹಕ್ಕುಗಳ ಆಯೋಗದ ಹೆಸರನ್ನು ಹೋಲುವಂತೆ ಹೆಸರನ್ನಿಟ್ಟುಕೊಂಡಿರುವ ಸಂಘ ಸಂಸ್ಥೆಗಳು ಹಾಗೂ ಸರ್ಕಾರಿ ಅಧಿಕಾರಿಗಳನ್ನು ಆಯೋಗದ ಹೆಸರಿನಲ್ಲಿ ಹೆದರಿಸುವ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗ ಅಧ್ಯಕ್ಷ ಶ್ಯಾಮ್ ಭಟ್ ಎಚ್ಚರಿಕೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಕರಣಗಳ ವಿಲೇವಾರಿ, ಸಾರ್ವಜನಿಕರ ಅಹವಾಲು ಸ್ವೀಕಾರ ಮತ್ತು ದೂರುಗಳ ವಿಚಾರಣೆ ಕುರಿತು ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಕೆಲವರು ಆಯೋಗದ ಹೆಸರಿನ ನಾಮಫಲಕವನ್ನು ವಾಹನಗಳ ಮುಂಭಾಗ ಅಳವಡಿಸಿಕೊಂಡು ತಿರುಗಾಡುತ್ತಿದ್ದಾರೆ. ಅದರ ಪದಾಧಿಕಾರಿಗಳು ಕಚೇರಿಗಳಿಗೆ ಹೋಗಿ ಹಣಕ್ಕೆ ಬೇಡಿಕೆ ಇಡುತ್ತಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಜಿಲ್ಲೆಯ ಅಧಿಕಾರಿಗಳು ಅಂತಹ ವ್ಯಕ್ತಿಗಳಿಗೆ ಯಾವುದೇ ಪ್ರೋತ್ಸಾಹ ನೀಡಬೇಡಿ ನಿಮ್ಮನ್ನು ಹೆದರಿಸುವ ವ್ಯಕ್ತಿಗಳ ಬಗ್ಗೆ ಜಿಲ್ಲಾಧಿಕಾರಿಗಳು ಅಥವಾ ಆಯೋಗಕ್ಕೆ ಮನವಿ ಸಲ್ಲಿಸಿ. ಇದನ್ನು ಗಂಭೀರವಾಗಿ ಪರಿಗಣಿಸಿದ್ದು ಅಂತವರ ವಿರುದ್ಧ ಕಾನೂನು ಕ್ರಮ ವಹಿಸಲು ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚೆ ಮಾಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಆಯೋಗದ ಆಪ್ತ ಕಾರ್ಯದರ್ಶಿ ಅರುಣ್ ಪೂಜಾರ್, ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ವಿ. ಸುರೇಶ್ ಮತ್ತಿತರರು ಇದ್ದರು.



ರಾಮನಗರ ಜಿಪಂ ಸಭಾಂಗಣದಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಶ್ಯಾಮ್ ಭಟ್ ಸಾರ್ವಜನಿಕರಿಂದ ಅಹವಾಲು ಆಲಿಸಿದರು.

> **ಮಹಿಳಾ ಹಾಸ್ಟೆಲ್‌ಗಳಲ್ಲಿ ಪ್ರತ್ಯೇಕವಾಗಿ ಡ್ರೆಸ್ಸಿಂಗ್ ರೂಮ್‌ಗಳನ್ನು ತೆರೆಯುವ ಅವಶ್ಯಕತೆಯಿದೆ. ಹೊಸ ಹೊಸ ಕಟ್ಟಡ ಪ್ರಸ್ತಾವನೆಯಿರುವೆಡೆ ಕಟ್ಟಡ ಕ್ರಿಯಾ ಯೋಜನೆಯಲ್ಲಿಯೇ ಡ್ರೆಸ್ಸಿಂಗ್ ಕೊಠಡಿಗೆ ಆದ್ಯತೆ ನೀಡಬೇಕು.**
> • **ಶ್ಯಾಮ್ ಭಟ್,** ಅಧ್ಯಕ್ಷರು, ರಾಜ್ಯ ಮಾನವ ಹಕ್ಕುಗಳ ಆಯೋಗ

## ಸುದ್ದಿ ಸಿಂಚನ

### ತಿಟ್ಟಮಾರನಹಳ್ಳಿ ಸುರೇಶ್‌ಗೆ ಸಿಎಂ ಪದಕ



**ಚನ್ನಪಟ್ಟಣ:** ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅಂಗರಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ತಾಲೂಕಿನ ತಿಟ್ಟಮಾರನಹಳ್ಳಿ ಗ್ರಾಮದ ಬಿ.ಸುರೇಶ್‌ಗೆ 2022ನೇ ಸಾಲಿನ ಮುಖ್ಯಮಂತ್ರಿ ಪದಕ ಲಭಿಸಿದೆ. ತಿಟ್ಟಮಾರನಹಳ್ಳಿ ಕೆಂಪಮ್ಮ ಬೋರೇಗೌಡ ದಂಪತಿ ಮಗನಾದ ಸುರೇಶ್ 2000ನೇ ಇಸವಿಯಲ್ಲಿ ಪೊಲೀಸ್ ಇಲಾಖೆ ಸೇರಿದ್ದು, ಬಳಿಕ 2003ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಭದ್ರತಾ ನಿರ್ವಹಣೆಗೆ ಸೇರಿದ್ದರು. 2012 ಮತ್ತು 2013ರಲ್ಲಿ ಅಂದಿನ ಮುಖ್ಯಮಂತ್ರಿಗಳಾದ ಸದಾನಂದಗೌಡ ಮತ್ತು ಜಗದೀಶ್ ಶೆಟ್ಟರ್‌ಬೆಂಗಾವಲಿನಲ್ಲಿ ಕರ್ತವ್ಯ ನಿರ್ವಹಿಸಿದ್ದರು. 2017ರಲ್ಲಿ ಮುಖ್ಯ ಪೇದೆಯಾಗಿ ಬಡ್ತಿ ದೊರೆತಿದ್ದು ಪ್ರಸ್ತುತ ಕೇಂದ್ರ ಸಚಿವ ಕುಮಾರಸ್ವಾಮಿಯವರ ಅಂಗರಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಳೆದ 23 ವರ್ಷಗಳ ಕಾಲ ಪೊಲೀಸ್ ಇಲಾಖೆಯಲ್ಲಿ ಉತ್ತಮ ಸೇವೆ ಸಲ್ಲಿಸಿದ ಇವರ ಉತ್ತಮ ಸೇವೆಯನ್ನು ಪರಿಗಣಿಸಿ ರಾಜ್ಯ ಸರಕಾರ 2022ನೇ ಸಾಲಿನ ಮುಖ್ಯಮಂತ್ರಿ ಪದಕ ನೀಡಿ ಗೌರವಿಸಿದೆ. ಪೊಲೀಸ್ ಇಲಾಖೆಗೆ ಸೇರುವ ಮುನ್ನ ಖಾಸಗಿ ಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಇವರಿಗೆ ಖೋಖೋ, ಕಬಡ್ಡಿ, ಜಿಲ್ಲಾಮಟ್ಟದ ಓಟದ ಸ್ಪರ್ಧೆಗಳಲ್ಲಿ ಸಾಕಷ್ಟು ಪ್ರಶಸ್ತಿಗಳು ಲಭಿಸಿವೆ. ಗ್ರಾಮಸ್ಥರು ಹಾಗೂ ಕುಟುಂಬಸ್ಥರ ಹರ್ಷ: ಸುರೇಶ್‌ಗೆ ಮುಖ್ಯಮಂತ್ರಿಗಳ ಪದಕ ಲಭಿಸಿರುವುದಕ್ಕೆ ತಿಟ್ಟಮಾರನಹಳ್ಳಿ ಗ್ರಾಮಸ್ಥರು, ಸ್ನೇಹಿತರು ಹಾಗೂ ಕುಟುಂಬಸ್ಥರು ಹರ್ಷ ವ್ಯಕ್ತಪಡಿಸಿದ್ದು, ತಮ್ಮ ನಿಸ್ವಾರ್ಥ ಸೇವೆ ಮೂಲಕ ಉತ್ತಮ ಹೆಸರು ಗಳಿಸಿರುವ ಇವರಿಗೆ ಇನ್ನಷ್ಟು ಪ್ರಶಸ್ತಿಗಳು ದೊರಕಲೆಂದು ಶುಭ ಹಾರೈಸಿದ್ದಾರೆ.

### ನಾಳೆ ಶ್ರೀ ರಾಮನವಮಿ

**ರಾಮನಗರ:** ತಾಲೂಕಿನ ಬಿಡದಿ ಹೋಬಳಿ ಹನುಮಂತ ನಗರದ ಶ್ರೀ ಕೋತಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಶ್ರೀರಾಮನವಮಿ ಅಂಗವಾಗಿ ಶ್ರೀ ವೀರಾಂಜನೇಯಸ್ವಾಮಿ ಟ್ರಸ್ಟ್ ವತಿಯಿಂದ ಏಪ್ರಿಲ್ 6ರಂದು ಅದ್ದೂರಿ ಶ್ರೀ ರಾಮ ನವಮಿ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಅನಾದಿ ಕಾಲ ದಿಂದಲೂ ನೆಲೆಸಿರುವ ಶ್ರೀ ಕೋತಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಸಹ ಶ್ರೀ ವಿಶ್ವಾವಸು ಸಂವತ್ಸರ ಚೈತ್ರಮಾಸ, ವಸಂತ ಋತು, ಉತ್ತರಾಯಣ ಶುಕ್ಲಪಕ್ಷ ನವಮಿ ಭಾನುವಾರ ದಂದು ಶ್ರೀ ಆಂಜನೇಯ ಸ್ವಾಮಿ, ಶ್ರೀ ರಾಮ, ಲಕ್ಷ್ಮಣ ದೇವರುಗಳ ಮೆರವಣಿಗೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಭಾನುವಾರ ಬೆಳಿಗ್ಗೆ ಪುಣ್ಯಾಹ ಮಹಾ ಪಂಚಾಮೃತ ಅಭಿಷೇಕ, 108 ಎಳನೀರು ಅಭಿಷೇಕ, ವಿಶೇಷ ಹೂವಿನ ಅಲಂಕಾರ ಹಾಗೂ 10 ಗಂಟೆಗೆ ಶ್ರೀರಾಮ, ಲಕ್ಷ್ಮಣ ಹಾಗೂ ಯಲ್ಲಮ್ಮ ದೇವಿಯನ್ನು ಬೆಳ್ಳಿರಥದಲ್ಲಿರಿಸಿ ಉತ್ಸವ ನಡೆಸಲಾಗುವುದು. ಉತ್ಸವದ ಅದ್ದೂರಿತನಕ್ಕೆ ಡೊಳ್ಳು ಕುಣಿತ, ಕಂಸಾಳೆ, ಪೂಜಾ ಕುಣಿತ ಸೇರಿದಂತೆ ಹಲವು ಸಾಂಸ್ಕೃತಿಕ ಕಲಾ ಮೇಳಗಳು ಮೆರಗು ನೀಡಲಿವೆ. ಈ ಧಾರ್ಮಿಕ ಕಾರ್ಯಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಪ್ರಸಾದ, ಅನ್ನದಾನ, ಹೆಸರು ಬೇಳೆ, ಮಜ್ಜಿಗೆ, ಪಾನಕ ವಿತರಣೆ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಎಸ್‌ಪಿಆರ್‌ತಿಮ್ಮೇಗೌಡ ಮನವಿ ಮಾಡಿದ್ದಾರೆ.



### ದೇವಾಲಯದ ಬಾಗಿಲು ಮುರಿದು ಕಳವು

**ಕನಕಪುರ:** ಮದ್ದೂರಮ್ಮ ಮತ್ತು ಶನೇಶ್ವರಸ್ವಾಮಿ ದೇವಾಲಯದಲ್ಲಿ ಚಿನ್ನದ ತಾಳಿ, ಗುಂಡು, ದೀಪದ ಕಂಬ ಕಳ್ಳತನ ಮಾಡಿರುವ ಘಟನೆ ಬಂಡೆ ಗ್ರಾಮದಲ್ಲಿ ನಡೆದಿದೆ. ತಾಲೂಕಿನ ಕಸಬಾ ಹೋಬಳಿಯ ಬಂಡೆ ಗ್ರಾಮದಲ್ಲಿರುವ ಮದ್ದೂರಮ್ಮ ಮತ್ತು ಶನೇಶ್ವರಸ್ವಾಮಿ ದೇವಾಲಯದಲ್ಲಿ ಯುಗಾದಿ ಹಬ್ಬದ ಅಂಗವಾಗಿ ಮದ್ದೂರಮ್ಮ ದೇವರಿಗೆ 4 ಗ್ರಾಂ ಚಿನ್ನದ ಎರಡು ತಾಳಿ, 2 ಗ್ರಾಂ ಚಿನ್ನದ ಗುಂಡು ಹಾಗೂ ಬೆಳ್ಳಿಯ ಕಡಗ ಮತ್ತು ಬೆಳ್ಳಿ ಬಳೆಗಳನ್ನು ಹಾಕಿ ಅಲಂಕಾರ ಮಾಡಿ ಯುಗಾದಿ ಹಬ್ಬದ ಅಂಗವಾಗಿ ಭಾನುವಾರ ಮತ್ತು ಸೋಮವಾರ ಎರಡು ದಿನ ಪೂಜೆ ಸಲ್ಲಿಸಲಾಗಿತ್ತು. ಮಂಗಳವಾರ ಹೊಸತೊಡಕು ಇದ್ದಿದ್ದರಿಂದ ಮಣಿಕಂಠ ಅವರು ದೇವಸ್ಥಾನಕ್ಕೆ ಹೋಗಿರಲಿಲ್ಲ. ಮಂಗಳವಾರ ದೇವಾಲಯದ ಬಾಗಿಲು ತೆರೆದಿರುವುದು ಕಂಡು ಅನುಮಾನಗೊಂಡ ಗ್ರಾಮಸ್ಥರು ಮಣಿಕಂಠರಿಗೆ ಮಾಹಿತಿ ನೀಡಿದ್ದಾರೆ ಸ್ಥಳಕ್ಕೆ ಬಂದು ನೋಡಿದಾಗ ದೇವಾಲಯದ ಬಾಗಿಲು ಮುರಿದು ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ. ಮಾ.31ರಂದು ರಾತ್ರಿ ಯಾರೂ ಕಳ್ಳರು, ದೇವಸ್ಥಾನದ ಬಾಗಿಲು ಮುರಿದು ಕಳ್ಳತನ ಮಾಡಿದ್ದು,ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ರಂಗನಾಥಸ್ವಾಮಿ ಬ್ರಹ್ಮ ರಥೋತ್ಸವ

## ಅರವಂಟಿಕೆ ಕಾರ್ಯಕ್ರಮದ ಆಹ್ವಾನ ಪತ್ರಿಕೆ ಬಿಡುಗಡೆಗೊಳಿಸಿದ ಸಿದ್ದಲಿಂಗ ಸ್ವಾಮೀಜಿ

• **ಕನ್ನಡಪ್ರಭ ವಾರ್ತೆ** ಮಾಗಡಿ

ತಿರುಮಲೆ ಶ್ರೀ ರಂಗನಾಥಸ್ವಾಮಿ ಬ್ರಹ್ಮ ರಥೋತ್ಸವದಂದು ತಾಲೂಕು ವೀರಶೈವ ಲಿಂಗಾಯತ ಅರವಂಟಿಕೆ ಸಮಿತಿ ವತಿಯಿಂದ ಏರ್ಪಡಿಸುವ ಅರವಂಟಿಕೆ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಶ್ರೀ ಸಿದ್ದಗಂಗಾ ಮಠದ ಪೀಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿ ಬಿಡುಗಡೆಗೊಳಿಸಿದರು.

ಇದೇ ವೇಳೆ ಶ್ರೀಗಳು ಮಾತನಾಡಿ, ತಿರುಮಲೆ ಶ್ರೀರಂಗನಾಥಸ್ವಾಮಿಯನ್ನು ಅನ್ನದ ರಂಗ ಎಂದೇ ಕರೆಯಲಾಗುತ್ತದೆ. ಶ್ರೀರಂಗನ ಬ್ರಹ್ಮರಥೋತ್ಸವಕ್ಕೆ ದೇಶದೆಲ್ಲೆಡೆಯಿಂದ ಲಕ್ಷಾಂತರ ಭಕ್ತರು ಆಗಮಿಸಿ ಸಂಭ್ರಮ, ಸಡಗರದಿಂದ ರಥೋತ್ಸವದಲ್ಲಿ ಭಾಗವಹಿಸುತ್ತಾರೆ. ಆ ಸಮಯದಲ್ಲಿ ಎಲ್ಲಾ ಸಣ್ಣ, ಪುಟ್ಟ ಸಮುದಾಯದವರು ಸಹ ಅರವಂಟಿಕೆಯನ್ನು ನಡೆಸಿಕೊಂಡು ಬರುತ್ತಾರೆ. ಮಾಗಡಿ ರಂಗನ ರಥೋತ್ಸವದಲ್ಲಿ ವೀರಶೈವ ಲಿಂಗಾಯಿತ ಸಮುದಾಯದ ಅರವಂಟಿಕೆ ಇರಲಿಲ್ಲ.

ಕಳೆದ ಮೂರು ವರ್ಷಗಳಿಂದ ರಂಗನ ಬ್ರಹ್ಮರಥೋತ್ಸವದಂದು ಮಾಗಡಿ ತಾಲೂಕು ವೀರಶೈವ ಲಿಂಗಾಯತ ಅರವಂಟಿಕೆ ಸಮಿತಿ ವತಿಯಿಂದ ಅರವಂಟಿಕೆಯನ್ನು ಪ್ರಾರಂಭಿಸಿ ಸಾವಿರಾರು ಭಕ್ತರಿಗೆ ಅನ್ನದಾಸೋಹ ನಡೆಸುತ್ತಿರುವುದು ಸಂತಸ ತಂದಿದೆ. ಈ ಭಾರಿ ಏಪ್ರಿಲ್ 11 ರ ಶುಕ್ರವಾರ ಶ್ರೀರಂಗನಾಥಸ್ವಾಮಿ ಬ್ರಹ್ಮರಥೋತ್ಸವ ನಡೆಯಲಿದ್ದು, ವೀರಶೈವ ಲಿಂಗಾಯತರ ಅರವಂಟಿಕೆ ಯಶಸ್ವಿಯಾಗಿ ನಡೆಯಲಿ ಎಂದು ಶ್ರೀ ಸಿದ್ದಲಿಂಗ ಸ್ವಾಮೀಜಿಗಳು ಶುಭ ಹಾರೈಸಿದರು.

ಮಹಾಸಭಾ ಜಿಲ್ಲಾ ಘಟಕದ ಉಪಾಧ್ಯಕ್ಷ ಈಶಸಿದ್ದಲಿಂಗಪ್ಪ ಮಾತನಾಡಿ, ಶ್ರೀರಂಗನ ಬ್ರಹ್ಮರಥೋತ್ಸವಕ್ಕೆ ದೇಶದೆಲ್ಲೆಡೆಯಿಂದ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಈ ಸಮಯದಲ್ಲಿ ಲಿಂಗಾಯತ ಸಮುದಾಯದ ಅರವಂಟಿಕೆ ಇಲ್ಲದ ಕಾರಣ ನಮ್ಮ ಸಮುದಾಯದವರು ಊಟವಿಲ್ಲದೇ ವಾಪಸ್ ತೆರಳುವ ಪರಿಸ್ಥಿತಿ ಇದ್ದ ಕಾರಣ, ಸಮಾನ ಮನಸ್ಕರು ಸೇರಿಕೊಂಡು ಮಾಗಡಿ ತಾಲೂಕು ವೀರಶೈವ ಲಿಂಗಾಯತ ಅರವಂಟಿಕೆಸಮಿತಿನೋಂದಾಯಿಸಿಕೊಂಡು ಕಳೆದ 3 ವರ್ಷಗಳಿಂದ ದಾಸೋಹವನ್ನು ನಡೆಸಿಕೊಂಡು ಬರಲಾಗುತಿದ್ದು, ಮಹಾಶಿವಯೋಗಿ, ತ್ರಿವಿಧ ದಾಸೋಹಿ ಲಿಂಗೈಕ್ಯ ಶ್ರೀ.ಶ್ರೀ. ಶಿವಕುಮಾರ ಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದೇವೆ ಎಂದು ಹೇಳಿದರು.

ಸಮಿತಿಯ ಅಧ್ಯಕ್ಷರಾದ ಕಿರಣ್‌ಕುಮಾರ್ ಕೆ.ಎಸ್. ಮಾತನಾಡಿ, ನಮ್ಮ ವೀರಶೈವ ಲಿಂಗಾಯತ ಅರವಂಟಿಕೆಯಲ್ಲಿ ಕಳೆದ ಬಾರಿ ಎಳು ಸಾವಿರಕ್ಕೂ ಹೆಚ್ಚು ಮಂದಿ ದಾಸೋಹ ಸ್ವೀಕರಿಸಿದ್ದು, ಅರವಂಟಿಕೆಯ ಆಹ್ವಾನ ಪತ್ರಿಕೆಯನ್ನು ಮಾಗಡಿ ತಾಲೂಕಿನಲ್ಲಿ ವೀರಶೈವ ಕುಟುಂಬಗಳು ಹೆಚ್ಚಾಗಿರುವ ಎಲ್ಲಾ ಗ್ರಾಮಗಳಿಗೂ ವಿತರಿಸಲಾಗಿದ್ದು, ನಮ್ಮ ವೀರಶೈವ ಲಿಂಗಾಯತರು ಒಂದೆಡೆ ಸೇರುವುದರ ಜೊತೆಗೆ ನಮ್ಮ ಸಮುದಾಯವನ್ನು ಸಂಘಟಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದು ತಿಳಿಸಿದರು.

ತಾಲೂಕು ವೀರಶೈವ ಲಿಂಗಾಯತ ಅರವಂಟಿಕೆ ಸಮಿತಿ ಉಪಾಧ್ಯಕ್ಷರಾದ ಎಂ.ಬಿ.ಮಹೇಶ್, ಬಿ.ಆರ್. ಸಂಘಟನಾ ಕಾರ್ಯದರ್ಶಿ ದೊಡ್ಡಿ ವೀರೇಶ್‌ಕುಮಾರ್, ನಿರ್ದೇಶಕರಾದ ಅಣ್ಣಪ್ಪ, ದ್ವಾರಾಕರಾಧ್ಯ, ಅರಸನಕುಂಟೆ ರೇಣುಕೇಶ್, ಸಮಾಜದ ಮುಖಂಡರಾದ ಎಸ್.ಸಿ.ಬಿ.ಎಸ್. ಮಂಜುನಾಥ್, ಕುದೂರು ಷಡಾಕ್ಷರಿ, ಚೇರ್ಮನ್ ಮಂಜುನಾಥ್, ಜುಟ್ಟನಹಳ್ಳಿ ವಿಎಸ್‌ಎಸ್‌ಎನ್ ಉಪಾಧ್ಯಕ್ಷ ತಟವಾಳ್ ರಾಜಶೇಖರ್, ಬೆಳಗುಂಬ ಬ್ಯಾಡರಹಳ್ಳಿ ಚಂದ್ರಶೇಖರ್, ಸಿದ್ದಗಂಗಾ ಶಿಕ್ಷಣ ಸಂಸ್ಥೆಯ ಎಂ.ಬಿ.ವಿಶ್ವನಾಥ್, ಎಂ.ಬಿ,ರುದ್ರೇಶ್ ಮತ್ತಿತತರರು ಹಾಜರಿದ್ದರು.



ಸಿದ್ದಲಿಂಗಾ ಸ್ವಾಮೀಜಿಗಳಿಗೆ ಅರವಂಟಿಕೆ ಕಾರ್ಯಕ್ರಮಕ್ಕೆ ಆಹ್ವಾನ ಪತ್ರಿಕೆ ನೀಡಲಾಯಿತು.

# ದಾಸಿಮಯ್ಯ ವಚನಗಳು ಇಂದಿಗೂ ಪ್ರಸ್ತುತ

**ದೊಡ್ಡಬಳ್ಳಾಪುರ:** ಇಲ್ಲಿನ ಕುಚ್ಚಪ್ಪನಪೇಟೆಯಲ್ಲಿ ದೇವರ ದಾಸಿಮಯ್ಯ ಸೇವಾ ಸಮಿತಿ ವತಿಯಿಂದ ದೇವರ ದಾಸಿಮಯ್ಯ ಭಾವಚಿತ್ರಕ್ಕೆ ಪೂಜೆ ಸಲ್ಲಿಕೆ ಪ್ರಸಾದ ವಿನಿಯೋಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ದೇವರ ದಾಸಿಮಯ್ಯ ಅವರ ಬದುಕು ಹಾಗೂ ಸಾಹಿತ್ಯ ಕುರಿತು ತಾಲೂಕು ಕಸಾಪ ಮಾಜಿ ಅಧ್ಯಕ್ಷ ಡಿ.ಶ್ರೀಕಾಂತ ಮಾತನಾಡಿ, ಆದ್ಯ ವಚನಕಾರ ದೇವರ ದಾಸಿಮಯ್ಯ ಅವರ ವಚನದಲ್ಲಿ ಬದುಕಿನ ಮೌಲ್ಯಗಳಿವೆ. ಸದಾ ಕಾಯಕದಲ್ಲಿಯೇ ನಿರತರಾಗಿದ್ದ ಅವರ ವಚನಗಳಲ್ಲಿ, ಕಾಯಕದ ಮಹತ್ವ ಅಡಗಿದ್ದು, ಅವರ ವಚನಗಳು ಹಲವಾರು ವಚನಕಾರರಿಗೆ ತತ್ವಜ್ಞಾನಿಗಳಿಗೆ ಸ್ಫೂರ್ತಿಯಾಗಿದೆ ಎಂದರು.

ನಗರಸಭಾ ಸದಸ್ಯೆ ಎಸ್.ವತ್ಸಲಾ, ಮಾಜಿ ಸದಸ್ಯ ಪಿ.ಸಿ.ಲಕ್ಷ್ಮೀನಾರಾಯಣ್, ಟಿ.ಎಂ.ಸಿ. ಬ್ಯಾಂಕ್ ಅಧ್ಯಕ್ಷ ಕೆ.ಪಿ.ವಾಸುದೇವ್, ದೇವಾಂಗ ಮಂಡಲಿಯ ಗೌರವ ಕಾರ್ಯದರ್ಶಿ ಎಂ.ಜಿ.ಅಮರನಾಥ್, ಯಕ್ಷಗಾನ ಕಲಾವಿದ ಕೆ.ಸಿ.ನಾರಾಯಣ್, ಎಂ.ಎ.ಬಿ.ಎಲ್ ವಿದ್ಯಾಸಂಸ್ಥೆಯ ಸಿಇಓ ಪ್ರಿಯಾಂಕ, ದಾಸಿಮಯ್ಯ ಸೇವಾ ಸಮಿತಿ ಪದಾಧಿಕಾರಿಗಳು ಭಾಗವಹಿಸಿದ್ದರು.



ದೊಡ್ಡಬಳ್ಳಾಪುರದ ಕುಚ್ಚಪ್ಪನಪೇಟೆಯಲ್ಲಿ ದೇವರ ದಾಸಿಮಯ್ಯ ಜಯಂತಿ ನಡೆಯಿತು.

# ಕನಕಪುರದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ



ಆರ್‌ಇಎಸ್ ಸಂಸ್ಥೆಯ ಆವರಣದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

**ಕನಕಪುರ:** ನಗರದ ರೂರಲ್ ಕಾಲೇಜಿನಲ್ಲಿ ರೋಟರಿ ಟ್ರಸ್ಟ್ ವತಿಯಿಂದ ರೂರಲ್ ಕಾಲೇಜಿನ ಐಕ್ಯೂಎಸಿ ಸಹಯೋಗದೊಂದಿಗೆ ಸ್ವಯಂಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಬೆಳಿಗ್ಗೆ 10 ಗಂಟೆಯಿಂದ ಶುರುವಾದ ರಕ್ತ ಸಂಗ್ರಹಣೆ ಕಾರ್ಯ ಸಂಜೆ 4 ಗಂಟೆಯವರೆಗೆ ನಡೆಯಿತು. ಸುಮಾರು 70 ಯೂನಿಟ್‌ನಷ್ಟು ರಕ್ತ ಸಂಗ್ರಹಣೆಯಾಗಿದೆ ಎಂದು ರಾಮನಗರದ ಬೆಳ್ಳಿ ರಕ್ತ ನಿಧಿ ಸಂಸ್ಥೆ ತಿಳಿಸಿ ಸ್ವಪ್ರೇರಿತರಾಗಿ ರಕ್ತದಾನ ಮಾಡಿದವರಿಗೆ ಪ್ರಮಾಣ ಪತ್ರವನ್ನು ವಿತರಣೆ ಮಾಡಲಾಯಿತು.

ರೂರಲ್ ಕಾಲೇಜಿನ ಪ್ರಾಂಶುಪಾಲ ಎಂ.ಟಿ. ಬಾಲಕೃಷ್ಣ ಮಾತನಾಡಿ, 18 ರಿಂದ 60 ವಯಸ್ಸಿನ ಮಿತಿಯವರು ರಕ್ತದಾನ ಮಾಡಬಹುದು. ಕೇವಲ 24 ಗಂಟೆಗಳಲ್ಲಿ ನಾವು ನೀಡಿದ ರಕ್ತಮರು ಉತ್ಪಾದನೆಯಾಗುತ್ತದೆ. ಇದರಿಂದ ಹೃದಯ ಸಂಬಂಧಿ ಮತ್ತು ಪಾರ್ಶ್ವವಾಯು ನಂತಹ ಸಮಸ್ಯೆಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಬಹುದು. ಇದೊಂದು ಅತ್ಯಮೂಲ್ಯ ಧಾನ ಎಂದರು.

ಸಂಸ್ಥೆಯ ಅಧ್ಯಕ್ಷ ಎಚ್.ಕೆ. ಶ್ರೀಕಂಠು, ಉಪಪ್ರಾಂಶುಪಾಲ ದೇವರಾಜು, ಎನ್‌ಸಿಸಿ ಅಧಿಕಾರಿ ವಿಜಯೇಂದ್ರ ಹಾಗೂ ಎನ್‌ಎಸ್‌ಎಸ್‌ನ ಸಂಯೋಜನಾ ಅಧಿಕಾರಿ ಡಾ. ಹನುಮಂತರಾಜು, ಡಾ. ತಮ್ಮಣ್ಣಗೌಡ, ಎ.ಪಿ. ಪ್ರಕಾಶ್, ರೋಟರಿ ಅಧ್ಯಕ್ಷ ಜಯಶಂಕರ್, ನಟೇಶ್, ಚಂದ್ರಪ್ರಭ, ನಾಗರಾಜು, ರಾಮಚಂದ್ರ, ಗೋವಿಂದರಾಜು ಆರ್‌ಇಎಸ್ ಸಂಸ್ಥೆಯ ನೌಕರರು ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಹಲವರು ಶಿಬಿರದಲ್ಲಿ ಭಾಗವಹಿಸಿದ್ದರು.

# 2 ಕೋಟಿ ವೆಚ್ಚದ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ

**ಸೂಲಿಬೆಲೆ:** ಗ್ರಾಮೀಣ ಭಾಗದ ಹಳ್ಳಿಗಳ ರಸ್ತೆ ಅಭಿವೃದ್ಧಿಗೆ ಮುಖ್ಯಮಂತ್ರಿಗಳವಿಶೇಷ ಅನುದಾನದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಶಾಸಕ ಶರತ್ ಬಚ್ಚೇಗೌಡ ಹೇಳಿದರು.

ಸೂಲಿಬೆಲೆ ಹೋಬಳಿ ವ್ಯಾಪ್ತಿಯ ಕಂಬಳಿಪುರ ಗ್ರಾಮ ಪಂಚಾಯತ್ ವ್ಯಾಪ್ತಿ ಹಾಗೂ ಗಿಡ್ಡಪ್ಪನಹಳ್ಳಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದರು.

ಕಂಬಳಿಪುರ ಗ್ರಾ.ಪಂ. ವ್ಯಾಪ್ತಿಯ ಬೇಗೂರು ಗ್ರಾಮದಲ್ಲಿ ಕಾಲೋನಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಸಮಾಜ ಕಲ್ಯಾಣಇಲಾಖೆಯ45 ಲಕ್ಷಅನುದಾನದಲ್ಲಿ ಮಾಡಲಾಗುತ್ತಿದೆ ಹಾಗೂ ಕಂಬಳೀಪುರ ಗ್ರಾಮದಲ್ಲಿ 40 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆಹಾಗೂ ಗಿಡ್ಡಪ್ಪನಹಳ್ಳಿ ಗ್ರಾಮಪಂಚಾಯತ್ ವ್ಯಾಪ್ತಿಯ ಗಿಡ್ಡಪ್ಪನಹಳ್ಳಿ ಗ್ರಾಮದಲ್ಲಿ ಅಲ್ಪಸಂಖ್ಯಾತ ಕಲ್ಯಾಣ ಅನುದಾನದಲ್ಲಿ 40 ಲಕ್ಷ ಹಾಗೂ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಅಂಕೊನಹಳ್ಳಿ ಗ್ರಾಮದಲ್ಲಿ 20 ಲಕ್ಷ ನಲ್ಲಾಗನಹಳ್ಳಿ ಗ್ರಾಮದಲ್ಲಿ 30 ಲಕ್ಷ ಅತ್ತಿಬೆಲೆ ಗ್ರಾಮದಲ್ಲಿ 20 ಲಕ್ಷ ಅನುದಾನ ನೀಡಲಾಗಿದ್ದು ಸುಮಾರು 2 ಕೋಟಿ ಅನುದಾನವನ್ನು ರಸ್ತೆ ನಿರ್ಮಾಣಕ್ಕೆ ಬಳಸಲಾಗಿದೆ ಎಂದರು.

ಹಾಪ್‌ಕಾಮ್ಸ್ ನಿರ್ದೇಶಕ ಎಂ.ಬಿ.ವೆಂಕಟೇಶ್, ಯುವ ಮುಖಂಡ ಜಿ.ನಾರಾಯಣಗೌಡ, ಗ್ರಾ.ಪಂ.ಅಧ್ಯಕ್ಷೆ ಮಲ್ಲಿಕಾ, ಸದಸ್ಯರಾದ ಬೈರೇಗೌಡ, ಅಶ್ವಿನಿ, ಬೇಗೂರು ರಾಜಣ್ಣ, ಕೃಷ್ಣ, ಗ್ರಾಪಂ ಅಧ್ಯಕ್ಷ ಜನಾರ್ಧನರೆಡ್ಡಿ, ರವಿಚಂದ್ರ, ಗಂಗೇಗೌಡ, ಪ್ರಕಾಶ್, ಪಿಳ್ಳಪ್ಪ, ಗ್ರಾ.ಪಂ.ಪಿಡಿಓ ಟಿ.ಎಸ್.ಮಂಜುನಾಥ್, ಬಿಲ್ ಕಲೆಕ್ಟರ್ ಮಂಜುನಾಥ್, ಕಾರ್ಯದರ್ಶಿ ಪುನೀತ್, ಗುತ್ತಿಗೆದಾರ ಶ್ರೀನಿವಾಸ್, ವಿನಯ್, ಗ್ರಾ.ಪಂ. ಸದಸ್ಯ ಬಸವರಾಜ್, ಹನುಮರಾಜ್, ನಾಗರಾಜ್, ವೆಂಕಟೇಶ್, ದೇವರಾಜ್, ಲೋಕೇಶ್, ಇತರರು ಇದ್ದರು.



ಸೂಲಿಬೆಲೆ ಹೋಬಳಿ ಅಂಕೋನಹಳ್ಳಿ ಗ್ರಾಮದಲ್ಲಿ ಮುಖ್ಯಮಂತ್ರಿ ವಿಶೇಷ ಅನುದಾನದ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಶರತ್ ಬಚ್ಚೇಗೌಡ ಗುದ್ದಲಿಪೂಜೆ ನೆರವೇರಿಸಿದರು, ರಾಜ್ಯ ಒಕ್ಕಲಿಗ ಸಂಘದ ಮಾಜಿ ನಿರ್ದೇಶಕ ಬಿ.ಎನ್.ಗೋಪಾಲಗೌಡ,ಹಾಪ್‌ಕಾಮ್ಸ್ ನಿರ್ದೇಶಕ ಎಂ.ವಿ.ವೆಂಕಟೇಶ್, ನಾರಾಯಣಗೌಡ,ಜನಾರ್ಧನರೆಡ್ಡಿ, ರವಿಚಂದ್ರ ಇತರರು ಇದ್ದರು.


**ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್**
(ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ನೋಂದಾಯಿತ ಕಛೇರಿ : ದಿ ಫೇರ್‌ವೇ, ನೆಲ ಮತ್ತು ಮೊದಲನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು-560071.

**ಇ-ಹರಾಜು ಸೂಚನೆ**

2002ರ ಭದ್ರತಾ ಹಿತಾಸಕ್ತಿ ನಿಯಮಗಳ ಪ್ರಾವಿಸೋ ರೂಲ್ 8(6) ಮತ್ತು 9 ರೊಂದಿಗೆ ಓದಿಕೊಳ್ಳಬೇಕಾದ ಸೆಕ್ಯುರೈಟೆಜೇಷನ್ ಅಂಡ್ ರೀಕನ್ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್ ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಸರ್ಫೇಸಿ ಕಾಯಿದೆ), 2002 ರಡಿ ಆಸ್ತಿಗಳ ಇ-ಹರಾಜು ಮಾರಾಟಕ್ಕಾಗಿ ಸಾರ್ವಜನಿಕ ಸೂಚನೆ

ಆದಾಗ್ಯೂ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಸರ್ಫೇಸಿ ಕಾಯಿದೆಯ ಕಲಂ 13(4)ರಡಿ ಕೆಳಕಂಡ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ವಿಸ್ತಾರವಾಗಿ ಮಾಹಿತಿ ನೀಡುವುದೇನೆಂದರೆ ಸಾಲ ಪಡೆಯಲು ಸಾಲಗಾರರು ಅಡಮಾನ ಮಾಡಿರುವ ಆಸ್ತಿಗಳನ್ನು ಬ್ಯಾಂಕಿಗೆ ಬಾಕಿಯಾಗಿರುವ ಸಾಲಗಳ ವಸೂಲಾತಿಗಾಗಿ ''ಎಲ್ಲಿ ಹೇಗಿದೆಯೋ ಹಾಗೆಯೇ'' ಹಾಗೂ ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ ಸರ್ಫೇಸಿ ಕಾಯಿದೆಯಂತೆ ಇ-ಹರಾಜು ಮಾರಾಟ ಮಾಡಲಾಗುತ್ತದೆ.

| ಕ್ರ. ಸಂ. | ಸಾಲದ ಖಾತಾ ಸಂಖ್ಯೆ | ಮೂಲ ಸಾಲಗಾರ/ ಸಹ-ಸಾಲಗಾರ/ ಜಾಮೀನುದಾರ/ಹೆಸರು | 13-2 ನೋಟೀಸ್ ದಿನಾಂಕ | ಸ್ವಾಧೀನತೆಯ ದಿನಾಂಕ | ಪ್ರಸ್ತುತ ಬಾಕಿ ಮೊತ್ತ ದಿನಾಂಕ 02.04.2025 ರಂದು ಇದ್ದಂತೆ | ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ | ಮೀಸಲು ಬೆಲೆ ಐಎನ್‌ಆರ್ | ಅರ್ನೆಸ್ಟ್ ಮನಿ ಡಿಪಾಸಿಟ್ (ಇಎಂಡಿ) ಐಎನ್‌ಆರ್ | ಇ-ಹರಾಜಿನ ದಿನಾಂಕ ಮತ್ತು ಸಮಯ | ಬಿಡ್ ಸಲ್ಲಿಸಲು ಸ್ಥಳ ಮತ್ತು ಕೊನೆಯ ದಿನಾಂಕ ಮತ್ತು ಸಮಯ |
|---|---|---|---|---|---|---|---|---|---|---|
| 1 | 46459440000130 46459670000195 & 46459670000219 | 1) ಶ್ರೀಮತಿ ಸೌಮ್ಯ ರಾಣಿ ಮಾಲೀಕರು: ಮೆ॥ ಹೋಟೆಲ್ ನಂದಿ ಗ್ರ್ಯಾಂಡ್ ಅಲ್ಲದೆ: ಮೆ॥ ಹೋಟೆಲ್ ನಂದಿ ಗ್ರ್ಯಾಂಡ್ 2) ಶ್ರೀ ಮಂಜುನಾಥ ಡಿ | 07.11.2024 | 16.01.2025 | ರೂ. 39,82,717.84 (ಮೂವತ್ತೊಂಭತ್ತು ಲಕ್ಷದ ಎಂಭತ್ತೆರಡು ಸಾವಿರದ ಏಳು ನೂರ ಹದಿನೇಳು ರೂ. ಪೈಸೆ ಎಂಭತ್ತನಾಲ್ಕು ಮಾತ್ರ) | 16.04.2025 Time: 09:30 AM to 05:00 PM | ರೂ. 46,17,000/- (ನಲವತ್ತಾರು ಲಕ್ಷದ ಹದಿನೇಳು ರೂ. ಮಾತ್ರ) | ರೂ. 4,61,700/- (ನಾಲ್ಕು ಲಕ್ಷದ ಅರವತ್ತೊಂದು ಸಾವಿರದ ಏಳುನೂರು ರೂ. ಗಳು ಮಾತ್ರ) | 22.04.2025 @ 02:00 PM | 21.04.2025, ಸಂಜೆ 05.00 ಗಂಟೆಯ ಒಳಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಮುಖ್ಯ ಕಛೇರಿ: ದಿ ಫೇರ್‌ವೇ, ನೆಲಮಹಡಿ ಮತ್ತು ಮೊದನೇ ಮಹಡಿ, ಸರ್ವೆ ಸಂ. 10/1, 11/2 ಮತ್ತು 12/2ಬಿ ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ನಂತರ, ಚಲ್ಲಘಟ್ಟ, ಬೆಂಗಳೂರು- 560071. |

ಭದ್ರತಾ ಆಸ್ತಿಯ ವಿವರಣೆ : ಸಕಲ ಸಮಸ್ತವೂ ಸೇರಿದ ಸ್ಥಿರಾಸ್ತಿ ಸೈಟ್ ನಂ.34, ವಿಪಿ ಖಾತಾ ಕ್ರ.ಸಂ.318, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲೂಕಿನ ಕಸಬಾ ಹೋಬಳಿ, ದೊಡ್ಡಹುಲ್ಲೂರು ಗ್ರಾಮದಲ್ಲಿರುವ ಆಸ್ತಿಯ ಚಕ್ಕುಬಂದಿ- ಪೂರ್ವದಿಂದ: ಸೈಟ್ ನಂ.35, ಪಶ್ಚಿಮದಿಂದ: ಸೈಟ್ ನಂ.33, ಉತ್ತರದಿಂದ: ರಸ್ತೆ, ದಕ್ಷಿಣದಿಂದ: ಸೈಟ್ ನಂ. 37. ಅಳತೆ: ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 40 ಅಡಿ, ಒಟ್ಟು ಅಳತೆ 1200 ಚದರ ಅಡಿ.

ಆಸ್ತಿಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನಿದೆಯೋ ಹಾಗೆಯೇ'' ಆಧಾರದಲ್ಲಿ ಮಾರಾಟ ಮಾಡಲಾಗುವುದು. ಇ-ಹರಾಜನ್ನು 'ಆನ್ ಲೈನ್' ಮೂಲಕ ನಡೆಸಲಾಗುತ್ತದೆ. ಹರಾಜನ್ನು ಬ್ಯಾಂಕ್ ಅಂಗೀಕೃತ ಸೇವಾ ಒದಗಿಸುವವರಾದ ಮೆ॥-4 ಕ್ಲೋಸರ್ ಮೂಲಕ https://bankauctions.in & www.foreclosureindia.com. ಎಂಬುವ ವೆಬ್‌ಪೋರ್ಟಲ್‌ನಲ್ಲಿ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ವಿವರಗಳಿಗಾಗಿ, ನೆರವಿಗಾಗಿ, ಕ್ರಮಗಳ ತಿಳಿದುಕೊಳ್ಳುವುದಕ್ಕಾಗಿ ಮತ್ತು ಇ-ಹರಾಜು ಆನ್‌ಲೈನ್ ತರಬೇತಿ ಪಡೆದುಕೊಳ್ಳುವುದಕ್ಕಾಗಿ ಭಾವಿ ಬಿಡ್‌ದಾರರು ಮೆ॥-4 ಕ್ಲೋಸರ್ ಸಂಪರ್ಕ ಶ್ರೀ ಎಂ ಶ್ರೀನಿವಾಸಲು, ಸಂಪರ್ಕ ಸಂ. 8142000809. Email id: info@bankauctions.in / srinivas@bankauctions.in. ಇವರನ್ನು ಸಂಪರ್ಕಿಸುವುದು.

ಷರತ್ತು ಮತ್ತು ನಿಬಂಧನೆಗಳ ಹೆಚ್ಚಿನ ವಿವರಗಳಿಗಾಗಿ ಹಾಗೂ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವುದಕ್ಕಾಗಿ ಹಾಗೂ ಆಸ್ತಿ ಸಂಬಂಧಿತ ಯಾವುದೇ ವಿವರಗಳಿಗಾಗಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳಾದ ಶ್ರೀ ರಂಜನ್ ನಾಯಕ್, (ಮೊ.ಸಂ. 6362951653), ಶ್ರೀ ಉಮೇಶ್ (ಮೊಬೈಲ್ ಸಂ. 8050149617) ಮತ್ತು ಶ್ರೀಮತಿ ಸಾಯಿದಾ (ಮೊಬೈಲ್ ಸಂ. 7400445147) ಅನ್ನು ಸಂಪರ್ಕಿಸುವುದು. ಅಧಿಕೃತ ಅಧಿಕಾರಿಗಳ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗೆ ಬಂದಂತೆ ಆಸ್ತಿಗಳ ಮೇಲೆ ಯಾವುದೇ ಋಣಭಾದ್ಯತೆಗಳು ಇಲ್ಲ. ಆದಾಗ್ಯೂ, ಇಚ್ಛೆಯುಳ್ಳ ಬಿಡ್‌ದಾರರು ಬಿಡ್ ಸಲ್ಲಿಸುವ ಮುಂಚೆ ಆಸ್ತಿಯ ಋಣಭಾದ್ಯತೆಗಳು ಹಾಗೂ ಸ್ವಾಮ್ಯ ಮುಂತಾದವುಗಳ ಬಗ್ಗೆ ಅವರದೇ ಸ್ವತಂತ್ರ ವಿಚಾರಣೆಗಳನ್ನು ನಡೆಸಿ ತಿಳಿದುಕೊಳ್ಳಬಹುದಾಗಿದೆ. ಷರತ್ತಿನ ಬಿಡ್‌ಗಳನ್ನು ಒಪ್ಪಿಕೊಳ್ಳುವುದಿಲ್ಲ. ಮೇಲೆ ಹೆಸರಿಸಲಾದ. ಸಾಲಗಾರರು/ ಜಾಮೀನುದಾರರು/ ಅಡಮಾನದಾರರುಗಳಿಗೆ ಈ ಮೂಲಕ ಅಧಿಸೂಚಿಸುವುದೇನೆಂದರೆ ಮೇಲೆ ತಿಳಿಸಿದ ಬಾಕಿ ಮೊತ್ತ ಜೊತೆಗೆ ಅಪ್ ಟು ಡೇಟ್ ಬಡ್ಡಿ ಹಾಗೂ ಸಾದಿಲ್ವಾರು ವೆಚ್ಚಗಳನ್ನು ಹರಾಜಿನ ದಿನಾಂಕಕ್ಕೆ ಮುಂಚೆ ಪಾವತಿ ಮಾಡಬೇಕು. ವಿಫಲರಾದಲ್ಲಿ ಮೇಲಿನ ಆಸ್ತಿಯನ್ನು ಮಾರಾಟ ಮಾಡಿ ಸಾಲದ ಬಾಕಿಗಾಗಿ ಹೊಂದಿಸಿಕೊಳ್ಳಲಾಗುವುದು. ಇನ್ನೂ ಬಾಕಿ ಉಳಿದ ಪಕ್ಷದಲ್ಲಿ ಅದನ್ನು ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲು ಮಾಡಿಕೊಳ್ಳಲಾಗುವುದು.

ದಿನಾಂಕ: 05.04.2025, ಸ್ಥಳ: ಬೆಂಗಳೂರು ಗ್ರಾಮಾಂತರ

ಸಹಿ/- ಅಧಿಕೃತ ಅಧಿಕಾರಿ, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್



**FORM No. 22.**
**General Notice in Respect of Interlocutory Application**
**IN THE HIGH COURT OF KARNATAKA AT BENGALURU**
**Notice to the Proposed R-11(b) vide order dated: 22.03.2025**
**R.S.A. No. 2033/2010**

**Vijayapura Vyavasaya, Seva Sahakara Sangha Ltd.**, Rep. by its Secretary ... **APPELLANTS**
(By Sri. R. Chandranna- Adv)
-V/s-
**B. Ramabasappa,** Since dead by LRS. **Sri. Y.S. Shivaprasad** and Ors. ... **RESPONDENTS**
(By Sri.T.M.Venkata Reddy and Anr.,- Advs for R-1a to R-1c)
(By Sri. Veena Kumar and Anr., Adv for R-13)
To: **PROPOSED LRS OF DECEASED R-11**
**R-11. SRI.R.NANJUNDAPPA,** SINCE DEAD BY LRS. **R-11b. SRI.N.MANJUNATH,** S/O LATE R.NANJUNDAPPA, AGED ABOUT 58 YEARS, R/AT BAZAAR STREET, MALUR TOWN, KOLAR DISTRICT.
WHEREAS the above named appellant has preferred an
1) I.A.No. 1/2019 for CD of 4361 days in filing LR application.
2) I.A.No.2/2019 for setting aside abatement.
3) I.A.No.3/2019 for bringing LRS of deceased R-11 on record as R-11(a) & R-11(b).

Notice is hereby given to you to appear in this Court in person or through an Advocate duly instructed or through some one authorised by law, to act for you in this case on **28.04.2025** at **10:30 A.M** in case you intend to contest the appeal. If you fail so to appear, the appeal will be dealt with, heard and decided in your absence.
Issued under my hand and the seal of this court, on this 28/03/2025
By order of the Court, Assistant Registrar, High Court of Karnataka, Bengaluru



ಕನ್ನಡಪ್ರಭ
ಚಿತ್ರಪ್ರಭ
SANDALWOOD ☆ TOLLYWOOD ☆ KOLLYWOOD ☆ MOLLYWOOD ☆ BOLLYWOOD ☆ HOLLYWOOD



**IN THE COURT OF THE 5TH ADDITIONAL DISTRICT & SESSIONS JUDGE AND JMFC AT DEVANAHALLI**
**M.A. No. 15006/2023**
Between:
Smt. Venkatamma & anothers. ....Appellants
And:-
S.L.A.O and Others. ...Respondents
**Notices to the Respondents No.4 LRs (a) to (c) UNDER ORDER 5 RULE 20 R/W SECTION 151 OF CODE OF CIVIL PROCEDURE**
**Respondents No.4 LRs (a):-**
**Smt. Parvathamma** W/o Late. Narayanaswamy Aged about 45 years
**Respondents No.4 LRs(b):-**
**Sri. Manohara** S/o Late. Narayanaswamy Aged about 25 years
**Respondents No.4 LRs(c):-**
**Sri. Munikrishna** S/o Late. Narayanaswamy Aged about 23 years
R4(a) to R4(c) are all R/at Sonnappanahalli Village, Jala Hobli, Yelahanka Taluk, Bangalore Urban District.
**Whereas** the above named appellants filed the instant Miscellaneous appeal and for other consequential reliefs in respect of the Award amount against the Respondents.
**Whereas** the Respondents No.4 LRs (a) to (c) are hereby summoned/noticed to appear in the said suit in person's or by a pleader duly instructed. The said suit stands posted for the appearance of the Respondents No.4 LRs (a) to (c) **on 17/04/2025 at 11.00 a.m.**
The said Respondents No.4 LRs (a) to (c) are required to appear before the 5TH ADDITIONAL DISTRICT & SESSIONS JUDGE AND JMFC AT DEVANAHALLI on the date and time mentioned supra. In default of appearance of Respondents No.4 LRs (a) to (c) on the day and hour above mentioned the above case will be heard and Disposed in accordance with law.
Given under my hand and seal of this Hon'ble court on this day of. **28/03/2025**
**BY ORDER OF THE COURT**
**Chief Ministerial Officer**
**5th ADDITIONAL DISTRICT & SESSIONS COURT, DEVANAHALLI**
Advocate for Appellants:-
**Shri. T.Seshagirirao**
**Shri. Vasanthkumar.S**
**Advocate,** office at:-
# 230,2nd Main, 2nd Cross, Mahalakshmi Layout, Bengaluru-560086



**AFFIDAVIT**
I, **RAJENDRA BABU .N.H,** S/o Late Hanumaiah, aged about 52 years, R/at Thomas School Road, Manjunath Layout, Subash Nagar, Nelamangala Taluk, Bangalore Rural District-562 123 do hereby declare that I was known and called as **RAJENDRA BABU .N.H** alias **BABU**, I further submit that my name is mentioned as **RAJENDRA BABU .N.H** in all my records and my name is mentioned as **BABU** in the **WILL** dated 22.01.2022, executed by mother Smt. Thimmakka, hence I declare that both the names i.e. **RAJENDRA BABU .N.H** and **BABU** are one and the same and refers to me only, vide affidavit dated 03.04.2025, sworn before Advocate and Notary **GANGARAJA .C.B** at Nelamangala.



**IN THE COURT OF THE II ADDL. DISTRICT AND SESSIONS JUDGE, BENGALURU RURAL DISTRICT AT BENGALURU**
**P & S.C. No. 8/2025**
**BETWEEN : Smt. Shankaramma,** W/o late Shankaraiah, Aged about 60 years, R/at Bellikere Village, Anugondanahalli Hobli, Hoskote Taluk, Bengaluru Rural District. **...Petitioner**
**AND: Nil. ...Respondent**
**PUBLIC NOTICE**
Whereas, the above named petitioner has filed the above petition Memorandum of Petition for probate Under Section 276 of The Indian Succession Act in respect of the Schedule Property in favour of the petitioner in respect of below mentioned Schedule the said Sri. Shakarappa S/o. late Rumaiah, died on 30.07.2023. The below mentioned Schedule.
Interested parties are hereby called to appear in this court in person or by pleader duly instructed **on 19.06.2025 at 11.00 AM** inform to show cause against the petitioners failing wherein the appearance will be heard and declared as exparte.
**SCHEDULE PROPERTY**
All that piece and parcel of the property bearing Survey No.9/4, measuring to an extent of 1 Acre 23 Guntas including 01 ¾ Guntas of Kharab, situated at Bellikere Village, Anugondanahalli Hobli, Hoskote Taluk, Bengaluru Rural District and bounded on:- East by : Property belongs to Venkataramanappa, Appaiah and Chikkanna, West by : Road, North by : Property belongs to Nagaraju and Sujathamma, South by : Property belongs to Venkateshappa.
Given under my hand and seal of the court on this 03th day of April 2025.
**By Order of the Court, Chief Administrative Officer, District & Sessions Court, Bangalore Rural District, Bangalore**
Advocate for Petitioner :
**S.G. Parthasarathi,** Advocate
No. 39/2, II Floor, ASVNV Bhavan, K.G. Road, Bengaluru-560009.